# 12

# ಸೆರೆಯ ನಂತರದ ಕಾಲಾವಧಿ

## ಜೆರುಬ್ಬಾಬೆಲನ ನೇತೃತ್ವದಲ್ಲಿ ಹಿಂದಿರುಗುವಿಕೆಯಿಂದ ಹಳೇ ಒಡಂಬಡಿಕೆಯ ಮುಕ್ತಾಯದ ವರೆಗೆ

## ಕ್ರಿ.ಪೂ. 536-400

ಬಬಿಲೋನಿನ ಸೆರೆಯಿಂದ ಹಿಂದಿರುಗಿದ್ದು, ಸೆರೆಯವಾಸದ ಬಗ್ಗೆ ಮುಂತಿಳಿಸಲ್ಪಟ್ಟಂತೆಯೇ ನಿರ್ದಿಷ್ಟವಾಗಿ ಮುಂತಿಳಿಸಲ್ಪಟ್ಟಿತ್ತು; ಮತ್ತು ಹಿಂದಿರುಗುವಿಕೆಯು ಸಾಮಾನ್ಯವಾಗಿ ಬಬಿಲೋನಿನ ಪತನಕ್ಕೆ ಸಂಬಂಧಿಸಲ್ಪಡುತ್ತದೆ (ಹೋಲಿಸು ಯೆಶಾಯ 13; 14; ಯೆರೆಮೀಯ 25:12; 50:51; ಇತ್ಯಾದಿ; ದಾನಿಯೇಲ 9:1, 2). ಸೆರೆಯ ವಾಸವು ಎಪ್ಪತ್ತು ವರ್ಷಗಳ ಅವಧಿಯದಾಗಿರುವುದುದೆಂದು ಯೆರೆಮೀಯನು ಪ್ರವಾದಿಸಿದ್ದನ್ನು ಗಮನಿಸಬೇಕು. ಸೆರೆಹೋದ ಜನಾಂಗದ ಈ ಹಿಂದಿರುಗುವಿಕೆಯು ಒಂದು ಅದ್ವಿತೀಯವಾದ ಸಂಗತಿಯಾಗಿದೆ; ಚರಿತ್ರೆಯಲ್ಲಿ ಇಂಥದ್ದು ಯಾವುದೂ ಇರುವುದಿಲ್ಲ. ಹಿಂದಿರುಗುವಿಕೆಯ ಮೂರು ನಿರ್ದಿಷ್ಟವಾದ ಅವಧಿಗಳಿರ್ರುವೆ.

**1. ಜೆರುಬ್ಬಾಬೆಲನ ನೇತೃತ್ವದಲ್ಲಿ ಹಿಂದಿರುಗುವಿಕೆ** (ಕ್ರಿ.ಪೂ. 536. ದಾನಿಯೇಲ 9; ಎಜ್ರ 1-6).-ಪ್ರವಾದನೆಗಳಿಂದ ಸೆರೆಯವಾಸದ ಎಪ್ಪತ್ತು ವರ್ಷಗಳು ತೀರಿಹೋದವೆಂದು ದಾನಿಯೇಲನು ತಿಳಿದುಕೊಂಡನು ಮತ್ತು ತನ್ನ ಜನರ ಪರವಾಗಿ ದೇವರಿಗೆ ಆಸಕ್ತಿಯಿಂದ ಪ್ರಾರ್ಥನೆ ಮಾಡಿದನು. ದೊಡ್ಡ ಕೋರೇಷನು, ಬಬಿಲೋನನ್ನು ಜಯಿಸಿದವನು ಮತ್ತು ಪರ್ಶಿಯನ್ ಸಾಮ್ರಾಜ್ಯವನ್ನು ಸ್ಥಾಪಿಸಿದವನು, ಬಹುಶಃ ದಾನಿಯೇಲನಿಂದ ಪ್ರಭಾವಿತನಾಗಿ, ಯೆಹೂದ್ಯರು ಪಾಲೆಸ್ತೀನಿಗೆ ಹಿಂದಿರುಗಲು ಅಪ್ಪಣೆಕೊಟ್ಟು ಆಜ್ಞೆ ಹೊರಡಿಸಿದನು, ರಾಜ ವಂಶದ ಒಬ್ಬ ರಾಜಕುಮಾರ ಜೆರುಬ್ಬಾಬೆಲನು ಸುಮಾರು ಐವತ್ತು ಸಾವಿರ ಜನರ ಮೊದಲನೆಯ ಗುಂಪಿನ ನಾಯಕತ್ವ ವಹಿಸಿದನು. ನೆಬೂಕದ್ನೆಚ್ಚರನು ತೆಗೆದುಕೊಂಡು ಹೋಗಿದ್ದ ದೇವಾಲಯದ ಪಾತ್ರೆಗಳನ್ನು ಅವರು ಹಿಂದಿರುಗಿ ತೆಗೆದುಕೊಂಡು ಬಂದರು, ಅವರು ಕೂಡಲೇ ಹಳೇ ವೇದಿಯ ಸ್ಥಳದಲ್ಲಿ ಒಂದು ವೇದಿಯನ್ನು ಕಟ್ಟಿದರು, ಮತ್ತು ಅನಂತರ ಬೇಗನೇ ಎರಡನೆಯ ದೇವಾಲಯದ ಅಸ್ತಿವಾರವನ್ನು ಹಾಕಿದರು, ಇದು ಯುವಕರ ಜಯಘೋಷಣೆಯ ಮತ್ತು ಮೊದಲನೆಯ ದೇವಾಲಯದ ವೈಭವವನ್ನು ನೋಡಿದ್ದ ಪ್ರಾಯಸ್ಥರ ಕಣ್ಣೀರ ಮಧ್ಯದಲ್ಲಿ ಇದಾಯಿತು, ಕೆಲಸದಲ್ಲಿ ತೊಡಗಲು ಸಮಾರ್ಯದ ಅಪ್ಪಣೆ ಕೇಳಿದರು, ಮಿಶ್ರ ಕುಲದವರೊಂದಿಗೆ, ಮಿಶ್ರ ಧರ್ಮದೊಂದಿಗೆ ಒಪ್ಪಂದ ಮಾಡಿಕೊಳ್ಳುವುದರ ಪರಿಣಾಮದ ಬಗ್ಗೆ ಭಯಪಟ್ಟು ಜೆರುಬ್ಬಾಬೆಲನು ನಿರಾಕರಿಸಿದನು. ಕೆಲಸವನ್ನು ನಿಲ್ಲಿಸಲಿಕ್ಕೆ ಸಮಾರ್ಯದವರು ಪರ್ಷಿಯನ್ ಕೋರ್ಟಿನಲ್ಲಿ ತಮ್ಮ ಪ್ರಭಾವವನ್ನು ಉಪಯೋಗಿಸಿದರು. ಹದಿನಾರು ವರ್ಷಗಳವರೆಗೆ ಕೆಲಸವು ತಟಸ್ಥವಾಗಿ ನಿಂತಿತು. ಅಂತಿಮವಾಗಿ, ಹಗ್ಗಾಯ ಮತ್ತು ಜೆಕರ್ಯ ಪ್ರವಾದಿಗಳ ಪ್ರೇರೇಪಣೆಯಿಂದ, ಸಮಾರ್ಯರ ನಿರಂತರ ತೊಂದರೆಯಿದ್ದಾಗೂ, ಕೆಲಸವು ಪೂರ್ತಿಗೊಳಿಸಲ್ಪಟ್ಟಿತು. ಈ ಸಮಯದಿಂದ ಕ್ರಿಸ್ತನ ಸಮಯದವರೆಗೆ

ಯೆಹೂದ್ಯರಿಗೂ ಸಮಾರ್ಯದವರಿಗೂ ಮಧ್ಯದಲ್ಲಿ ವಿಷಯ ಹೋರಾಟವು ನಡೆದೇ ಇತ್ತು.

**2. ರಾಣಿ ಎಸ್ತೇರಳ ಕಥೆ** (ಎಸ್ತೇರಳು 1-10).-ಮೊದಲನೆಯ ಮತ್ತು ಎರಡನೆಯ ಹಿಂದಿರುಗುವಿಕೆಗಳ ಮಧ್ಯದಲ್ಲಿ ಎಸ್ತೇರಳ ಪುಸ್ತಕದಲ್ಲಿ ವಿವರಿಸಿದ ಘಟನೆಗಳು ನಡೆದವು. ಅಹಷ್ವೇರೋಷನು, ಗ್ರೀಕ್ ಮತ್ತು ಪರ್ಷಿಯನ್ ಚರಿತ್ರೆಯ ಅರಸನು ರಾಣಿ ವಷ್ಟಿಯ ಬಗ್ಗೆ ಅಸಂತುಷ್ಟನಾಗಿ ಆಕೆಯನ್ನು ತ್ಯಜಿಸಿದನು. ಸುಂದರವಾದ ಯೆಹೂದಿ ಕನ್ಯೆ ಎಸ್ತೇರಳನ್ನು ಆಕೆಯ ಜಾನಾಂಗಿಕತೆಯನ್ನು ತಿಳಿಯದೇ ವಿವಾಹವಾದನು. ಹಾಮಾನನು, ಒಬ್ಬ ಪರ್ಷಿಯ ಸರದಾರನ ಹುದ್ದೆಯಲ್ಲಿ ಮೇಲಕ್ಕೇರಿಸಲ್ಪಟ್ಟು ಪ್ರಥಮಸ್ಥಾನವನ್ನು ಹೊಂದಿಕೊಂಡನು. ಎಸ್ತೇರಳ ಚಿಕ್ಕಪ್ಪನಾದ ಮೋರ್ದೆಕೈಯು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡದ್ದರಿಂದ ಅವನ ಬಗ್ಗೆ ಕೋಪಗೊಂಡನು ಮತ್ತು ಸಾಮ್ರಾಜ್ಯದಲ್ಲಿ ಇದ್ದ ಎಲ್ಲಾ ಯೆಹೂದ್ಯರನ್ನು ಕೊಲ್ಲಲು ಯೋಜನೆ ಮಾಡಿಕೊಂಡನು. ಅಹಷ್ವೇರೋಷನು ಮನಸ್ಸೂ ಮನಸ್ಸಿಲ್ಲದೇ ಅವನ ಆಜ್ಞೆಗೆ ಒಪ್ಪಿಕೊಂಡನು, ಎಸ್ತೇರಳು, ತನಗೆ ಅಪಾಯವಿದ್ದರೂ, ತನ್ನ ಜನರಿಗಾಗಿ ಬೇಡಿಕೊಳ್ಳಲು ಸಾಹಸದ ಮನೋಭಾವನೆಯಿಂದ ಪ್ರತಿಬಂಧಿಸಲ್ಪಟ್ಟಿದ್ದ ಅರಸನ ಸನ್ನಿಧಿಯೊಳಗೆ ಹೋದಳು. ಆಕೆಯ ಮನವಿಯು ಕೇಳಲ್ಪಟ್ಟಿತು ಮತ್ತು ಹಾಮಾನನು ಮೋರ್ದೆಕೈಗಾಗಿ ಸಿದ್ಧಪಡಿಸಿದ್ದ ಗಲ್ಲುಕಂಬಕ್ಕೆ ನೇಣು ಹಾಕಲ್ಪಟ್ಟನು.

**3. ಎಜ್ರನ ನೇತೃತ್ವದಲ್ಲಿ ಹಿಂದಿರುಗುವಿಕೆ ಮತ್ತು ಸುಧಾರಣೆಗಳು** (ಕ್ರಿ.ಪೂ. 458. ಎಜ್ರ 7-10). -ಜೆರುಬ್ಬಾಬೆಲನ ನೇತೃತ್ವದಲ್ಲಿ ಹಿಂದಿರುಗಿದ ನಂತರ ಸುಮಾರು ಎಂಭತ್ತು ವರ್ಷಗಳಾದ ಮೇಲೆ, ಒಬ್ಬ ಯೆಹೂದಿ ಯಾಜಕ ಎಜ್ರನು ಸುಮಾರು ಏಳು ಸಾವಿರ ಜನರ ಒಂದು ಸಣ್ಣಗುಂಪಿನೊಂದಿಗೆ ಯೆರೂಸಲೇಮಿಗೆ ಹಿಂದಿರುಗಿ ಬಂದನು. ಜೆರುಬ್ಬಾಬೆಲನ ಜೊತೆ ಕೆಲಸದವರಲ್ಲಿ ಹೆಚ್ಚಾದವರು ಈಗಾಗಲೇ ಸತ್ತು ಹೋಗಿದ್ದರು. ಯೆಹೂದ್ಯರು ಸಮಾರ್ಯದವರೊಂದಿಗೆ ಅಂತರ್‌ವಿವಾಹ ಮಾಡಿಕೊಂಡು ಮೋಶೆಯ ನಿಯಮವನ್ನು ಕಡೆಗಣಿಸುತ್ತಿರುವುದನ್ನು ನೋಡಿ ಎಜ್ರನು ಬೇಸರಗೊಂಡನು. ಈ ದುರುಪಯೋಗಗಳನ್ನು ಅವನು ಸುಧಾರಿಸಿದನು ಮತ್ತು ಹಳೇ ಒಡಂಬಡಿಕೆಯ ಬರಹಗಳನ್ನು ಸಂಪಾದಿಸಿದನು. ಬಹುಶಃ ಈ ಸಮಯದಲ್ಲಿ ಪರಿಶುದ್ಧ ಬರಹಗಳಲ್ಲಿ ಹೆಚ್ಚು ಉತ್ತಮ ಬೋಧನೆಕೊಡುವುದಕ್ಕಾಗಿ ಸಭಾಮಂದಿರದ ಸೇವೆಗಳು ಸ್ಥಾಪಿಸಲ್ಪಟ್ಟಿದ್ದಿರ ಬಹುದು.

**4. ನೆಹೆಮೀಯನ ಹಿಂದಿರುಗುವಿಕೆ** (ಕ್ರಿ.ಪೂ. 445. ನೆಹೆಮೀಯ 1-13).-ಯೆಹೂದ್ಯರಲ್ಲಿ ಹೆಚ್ಚು ದೊಡ್ಡ ಸಂಖ್ಯೆಯಲ್ಲಿ ಹಿಂದಿರುಗಿ ಬರಲಿಲ್ಲ, ಆದರೆ ಸಾಮ್ರಾಜ್ಯದಲ್ಲೆಲ್ಲಾ ಚದರಿಹೋಗಿ ವಾಸಿಸಿದ್ದರೆಂಬುದು ಎಸ್ತೇರಳ ಕಥೆಯಿಂದ ಕಂಡುಬರುತ್ತದೆ. ಚದರಿಹೋದ ಈ ಯೆಹೂದ್ಯರಲ್ಲಿ ನೆಹೆಮೀಯನು ಒಬ್ಬನಾಗಿದ್ದನು, ಅವನು ಅರಸ ಅರ್ತಷಸ್ತ ಲೊಂಗಿಮಾನುಸನ ಗೌರವಾನ್ವಿತ ಪಾನ ಸೇವಕನಾಗಿದ್ದನು ಇತ್ತೀಚೆಗೆ ಶೂಶನ್ (ಸೂಸಾ) ಬಳಿ ತಲುಪಿದ ಯೆಹೂದ್ಯರ ಗುಂಪಿನ ಮುಖಾಂತರ, ಅವನು ಯೆರೂಸಲೇಮಿನ ಹಾಳಾದ ಮತ್ತು ಕಾಪಾಡಿಕೊಳ್ಳಲಾಗದ ಸ್ಥಿತಿಯ ಬಗ್ಗೆ ತಿಳಿದುಕೊಂಡನು, ಯೆರೂಸಲೇಮಿಗೆ ಹೋಗಿ ಅದರ ಗೋಡೆಗಳನ್ನು ಕಟ್ಟುವುದಕ್ಕಾಗಿ ಅವನು ಅರಸನ ಅಪ್ಪಣೆಯನ್ನು ಕೇಳಿಕೊಂಡನು. ಪ್ರಾಂತ್ಯದ ರಾಜ್ಯಪಾಲನಂತೆ ಅರಸನ ಅಪ್ಪಣೆಯೊಂದಿಗೆ ಅವನು ಯೂದಾಯಕ್ಕೆ ಹೋದನು. ಸಮಾರ್ಯರಿಂದ ಹೆದರಿಸುವಿಕೆಗಳಲ್ಲಿಯೂ ಅವರಿಂದ ಸತತವಾದ ಪೀಡೆಗಳಲ್ಲಿಯೂ ಅವನು ಧೈರ್ಯದಿಂದಲೂ ಶೌರ್ಯದಿಂದಲೂ ಐವತ್ತೆರಡು ದಿನಗಳಲ್ಲಿ ಗೋಡೆಗಳನ್ನು ಕಟ್ಟಿ ಮುಗಿಸಿದನು. ಜನರು ಒಂದು ಕೈಯಲ್ಲಿ ಆಯುದಗಳನ್ನು ಹಿಡಿದು ಕೊಂಡು ಇನ್ನೊಂದು

ಕೈಯಿಂದ ಕೆಲಸ ಮಾಡಬೇಕಾಗಿತ್ತು. ಹನ್ನೆರಡು ವರ್ಷಗಳವರೆಗೆ ನೆಹೆಮೀಯನು ಯೆಹೂದ್ಯರ ಗವರ್ನರನಾಗಿದ್ದನು. ಬಡಜನರ ಭಾರಗಳನ್ನು ಹಗುರುಗೊಳಿಸುವುದಕ್ಕಾಗಿ ತನ್ನ ಅಧಿಕೃತ ಮನೆತನದ ವೆಚ್ಚಗಳನ್ನು ತಾನೇ ವಹಿಸಿಕೊಂಡಿದ್ದನು. ಆಮೇಲೆ ಅವನು ಪರ್ಷಿಯಾಕ್ಕೆ ಹಿಂದಿರುಗಿ ಹೋದನು. ಆದರೆ ಅನಂತರದಲ್ಲಿ ಮಿಶ್ರ ಮದುವೆಗಳನ್ನು ಸರಿಪಡಿಸುವುದಕ್ಕಾಗಿ, ಸಬ್ಬತ್ ಆಚರಣೆಯನ್ನು ಮೀರಿದ್ದನ್ನೂ ಹಾಗೂ ಜನರಲ್ಲಿ ನುಸುಳಿಕೊಂಡಿದ್ದ ಇತರ ದುರುಪಯೋಗಗಳನ್ನು ಸರಿಪಡಿಸುವುದಕ್ಕಾಗಿ ಯೆರೂಸಲೇಮನ್ನು ಸಂದರ್ಶಿಸಿದನು.

**5. ಕೊನೆಯ ಪ್ರವಾದಿ ಮತ್ತು ಹಳೇ ಒಡಂಬಡಿಕೆಯ ಮುಕ್ತಾಯ.**-ನೆಹೆಮೀಯನ ಸಮಯದಲ್ಲಿ ಇಲ್ಲವೇ ಅದರ ನಂತರ ಬೇಗನೇ, ಹಿಬ್ರೂ ಪ್ರವಾದನೆಯ ಕೊನೆಯ ಮಾತು ಮಲಾಕಿಯನಿಂದ ಹೇಳಲ್ಪಟ್ಟಿತು, ಮದುವೆಯ ಒಡಂಬಡಿಕೆಯನ್ನು ಉಲ್ಲಂಘಿಸಿದ್ದಕ್ಕಾಗಿ ಯಾಜಕರನ್ನೂ, ಧರ್ಮದಲ್ಲಿ ಆಚಾರಗಳಿಗಾಗಿ ಜನರನ್ನೂ ಗದರಿಸಿದನು. ಮತ್ತು ಹಳೇ ಒಡಂಬಡಿಕೆಯ ಶಾಸ್ತ್ರವನ್ನು "ಪ್ರವಾದಿ ಎಲೀಯನ," ಮೆಸ್ಸೀಯನ ಮುಂದೂತನ, ಹೊಸ ಒಡಂಬಡಿಕೆಯ ಸ್ನಾನಿಕನಾದ ಯೋಹಾನನ ಪ್ರವಾದನೆಯೊಂದಿಗೆ ಮುಕ್ತಾಯ ಗೊಳಿಸಿದನು.

**6. ಪರಿಶುದ್ಧ ಚರಿತ್ರೆಯಲ್ಲಿ ವಿರಾಮ.**-ಹೀಗೆ ಹಳೇ ಒಡಂಬಡಿಕೆಯ ಚರಿತ್ರೆಯ ಗ್ರಂಥವು ಮುಕ್ತಾಯಗೊಳ್ಳುತ್ತದೆ. ನಾಲ್ಕುನೂರು ವರ್ಷಗಳ ವರೆಗೆ ಪ್ರವಾದನೆಯ ಧ್ವನಿಯು ಮೌನವಾಗಿತ್ತು, ಆಯ್ದುಕೊಳ್ಳಲ್ಪಟ್ಟ ಜನಾಂಗವು ಪುನಃ ವಾಗ್ದತ್ತ ದೇಶದಲ್ಲಿ ನೆಲೆಗೊಂಡಿತ್ತು. ಆದರೆ ವಿಶಾಲ ಸಾಮ್ರಾಜ್ಯಗಳ ಒಂದು ಭಾಗದಂತೆ ಮಾತ್ರ ಇತ್ತು. ಅವರು ಸ್ವತಂತ್ರ ಜನಾಂಗವಾಗಿರುವುದು ಮುಗಿದು ಹೋಗಿತ್ತು, ಐದು ನೂರು ವರ್ಷಗಳವರೆಗೆ ರಾಜಕೀಯ ಜೀವನದಲ್ಲಿ ತೊಂದರೆಗೊಳಗಾಗಿದ್ದರು. ಮಕ್ಕಬ್ಬೀಯರ ಕೆಳಗೆ ಜನಾಂಗೀಕತೆಯ ಅಲ್ಪ ಬೆಳಕಿನಲ್ಲಿ ಸ್ವಲ್ಪ ಕಾಲ ಇದ್ದದ್ದನ್ನು ಬಿಟ್ಟರೆ, ಒಂದರ ನಂತರ ಒಂದಕ್ಕೆ ಪರ್ಷಿನ್ನರಿಗೆ, ಮಕೆದೋನಿಯರಿಗೆ ಮತ್ತು ರೋಮನ್‌ರಿಗೆ ಅಧೀನರಾಗಿದ್ದರು. ಆದರೆ ರಾಜಕೀಯ ಸ್ವತಂತ್ರ್ಯದ ಅವನತಿಯು ಅವರ ರಾಷ್ಟ್ರೀಯ ಪ್ರತ್ಯೇಕತೆಯನ್ನು ತೀವ್ರಗೊಳಿಸಲು ಸಹಾಯಮಾಡಿತು. ಕ್ರಿಸ್ತನಿಗಿಂತ ಮೊದಲು ನಾಲ್ಕು ಶತಮಾನಗಳಲ್ಲಿ ಯೆಹೂದ್ಯರು ಯಾವುದೇ ತಪ್ಪುಗಳನ್ನು ಬೆಳಿಸಿಕೊಂಡಿದ್ದರೂ ಅವುಗಳಲ್ಲಿ ವಿಗ್ರಹಾರಾಧನೆಯು ಒಂದಾಗಿರಲಿಲ್ಲ. ಸೆರೆವಾಸದ ಶಿಕ್ಷಣವು, ದಾನಿಯೇಲನ ಮತ್ತು ಅವನ ಜೊತೆಯಲ್ಲಿದ್ದವರ ಶ್ರೇಷ್ಠ ಉದಾಹರಣೆಯು, ಮತ್ತು ಎಜ್ರ ಹಾಗೂ ನೆಹೆಮೀಯರ ಕಾರ್ಯವು ಅದನ್ನು ಎಂದೆಂದಿಗೂ ವಾಸಿಮಾಡಿತು. ಬಲವುಳ್ಳ ಜನಾಂಗಗಳ ಪ್ರಭಾವಶಾಲಿ ವಿಗ್ರಹಾರಾಧನೆಗಳ ಮಧ್ಯದಲ್ಲಿ ಒಂದು ತಿರಸ್ಕರಿಸಲ್ಪಟ್ಟ ಚಿಕ್ಕ ಜನಾಂಗವಿತ್ತು. ಅವರು ದೇವರ ಐಕ್ಯತೆಯನ್ನೂ ಆತ್ಮಿಕತೆಯನ್ನೂ ಬಲವಾಗಿ ಹಿಡಿದುಕೊಂಡಿದ್ದರು; ಬಹುದೇವತಾರಾಧನೆಯ ವಿಶ್ವವ್ಯಾಪಿ ಮರುಭೂಮಿಯಲ್ಲಿ ಒಂದು ಓಯಾಸಿನ್ (ಮರುಭೂಮಿಯಲ್ಲಿ ಫಲವತ್ತಾದ ಪ್ರದೇಶ) ಆಗಿತ್ತು. ಯುದಾಯತ್ವದ ಮುಳ್ಳಿನ ಕಾಂಡವು ವಾಗ್ದತ್ತ ದಾವೀದನ ಕುಮಾರನಲ್ಲಿ ಮತ್ತು ದೇವರ ಕುಮಾರನಲ್ಲಿ ಮತ್ತು ವಿಶ್ವ ಪ್ರೀತಿಯು ಆತನ ಧರ್ಮದಲ್ಲಿ ಅರಳುವವರೆಗೆ ದೈವಿಕವಾಗಿ ಕಾಪಾಡಲ್ಪಟ್ಟಿತು; ಆಗ ಟೈಟಸ್ ಮತ್ತು ಅವನ ರೋಮನ್ ಸೈನ್ಯಗಳಿಂದ ಮಾಡಲ್ಪಟ್ಟ ಯುದ್ಧಗಳ ಬಿರುಗಾಳಿಯಲ್ಲಿ ರಭಸದಿಂದ ಹಾರಿಹೋಯಿತು.

© 2009 Truth for Today